## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.

## ಸಿ.ಸಿ.ನಂ. 48/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮುರಳಿ** | | |
| **ಗಂಡಃತಂದೆಃಹೆಸರು** | **ವೆಂಕಟರೆಡ್ಡಿ** | **ಪಿಡಬ್ಲೂಃ** | **1** |
| **ವಯಸ್ಸು** | **46 ವರ್ಷ** | **ಸಿಡಬ್ಲೂಃ** | **1** |
| **ಉದ್ಯೋಗಃ** | **ವ್ಯಾಪಾರ** | | |
| **ವಾಸ ಸ್ಥಳಃ** | **ಚೀಮನಹಳ್ಳಿ ಗ್ರಾಮ ,<br>ಚಿಂತಾಮಣಿ.** | | |

**ದಿನಾಂಕ 05-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ-**

ಚಾಸಾ 2 ಮತ್ತು 3 ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವ ಯಾವ ವಾಹನಗಳ ಮಧ್ಯೆ ಅಪಘಾತ ವಾಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಎಲ್ಲಿ ಮತ್ತು ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಮೃತ ಕೃಷ್ಣಾ ರೆಡ್ಡಿ ರವರಿಗೆ ಅಪಘಾತವಾಗಿದೆ ಎಂದು ತಿಳಿದು ನಾನು ಆಸ್ಪತ್ರೆಗೆ ಹೋದಾಗ ಪೋಲೀಸರು ನನ್ನ ಸಹಿಯನ್ನು ಪಡೆದುಕೊಂಡರು.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ದೂರನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಕೃತ್ಯಸ್ಥಳದ ಪಂಚನಾಮೆಯನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

ನಿಪಿ 2 ಕ್ಕೆ ಯಾವಾಗ ಮತ್ತು ಎಲ್ಲಿ ಸಹಿ ಮಾಡಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಮಹಜರ್ ಮಾಡಿಲ್ಲ. ವಾಹನವನ್ನು ಅಮಾನತುಪಡಿಸಿಕೊಂಡಿಲ್ಲ.

ನಿ.ಪಿ.1 ಮತ್ತು 2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ದಿ. 24.10.2021 ರಂದು ಸಂಜೆ 06.40 ಗಂಟೆಯಲ್ಲಿ ಸಮಯದಲ್ಲಿ ಗೋಪಸಂದ್ರ – ಬೂರಗಮಾಕಲಹಳ್ಳಿ ರಸ್ತೆಯ ಹನುಮಂತರಾಯಪ್ಪ ಜಮೀನಿನ ಬಳಿ ಇರುವ ರಸ್ತೆಯಲ್ಲಿ ಚಿಂತಾಮಣಿ ಕಡೆಯಿಂದ ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ನಂದಿಗಾನಹಳ್ಳಿ ಗ್ರಾಮದ ಕೃಷ್ಣರೆಡ್ಡಿ ರವರು ಸವಾಗಿ ಮಾಡುತ್ತಿದ್ದ ಕೆ ಎ 40 ಇಬಿ 5982 ಪ್ಯಾಶನ್ ಪ್ರೋ ವಾಹನದ ಹಿಂಭಾಗಕ್ಕೆ ಕಾರನ್ನು ಡಿಕ್ಕಿ ಹೊಡೆಸಿದ ಪರಿಣಾಮ ವಾಹನ ಸಮೇತ ಕೃಷ್ಣರೆಡ್ಡಿ ರಸ್ತೆಯ ಮೇಲೆ ಬಿದ್ದು ಹಣೆಗೆ , ಮುಖಕ್ಕೆ , ಮೈ ಕೈಗೆ ತರಚಿದ ಮತ್ತು ರಕ್ತಗಾಯಗಳಾಗಿದ್ದು ಚಿಕಿತ್ಸೆಗಾಗಿ ಚಿಂತಾಮಣಿ ಆಸ್ಪತ್ರೆಗೆ ದಾಖಲಿಸಿದ್ದು ಕೃಷ್ಣರೆಡ್ಡಿ ರವರು ಅದೇ ದಿನ ಸಂಜೆ 07.30 ಗಂಟೆಗೆ ಮೃತ ಪಟ್ಟಿರುತ್ತಾರೆ. ನಂತರ ಅಪಘಾತ ಪಡಿಸಿದ ಆರೋಪಿ , ಚಾಲಕ ಚಿಕಿತ್ಸೆ ಗೆ ಗಾಯಾಳುವಿಗೆ ಸಹಕರಿಸದೇ ಪೋಲೀಸರಿಗೆ ಮಾಹಿತಿ ನೀಡದೆ ಸ್ಥಳದಿಂದ ಹೊರಟು ಹೋಗಿದ್ದು

ಅದಕ್ಕೆ ಆರೋಪಿಯೆ ಕಾರಣ ಎಂದರೆ ಸರಿಯಲ್ಲ. ಆರೋಪಿಯ ಕಾರಿನ ಸಂ. ಎಪಿ 05 ಬಿಎಲ್ 3989 ಎಂದರೆ ಸರಿಯಲ್ಲ.

ದಿ. 05.10.2021 ರಂದು ಚಿಂತಾಮಣಿ ಮದನಪಲ್ಲಿ ರಸ್ತೆಯ ಗೋಪಸಂದ್ರ – ಬೂರಗಮಾಕಲಹಳ್ಳಿ ಗ್ರಾಮದ ಹನುಮಂತರಾಯಪ್ಪನ ಜಮೀನಿನ ಟಾರು ರಸ್ತೆಯ ಬಳಿ ಪೋಲೀಸರು ನನ್ನ ಮತ್ತು ಚಾಸಾ 5 ಮತ್ತು 6 ಸಮಕ್ಷಮ ಮದ್ಯಾಹ್ನಃ 02.30 – 03.15 ರವರೆಗೆ ಪಂಚಾನಮೆ ಮಾಡಿ ಕೆ ಎ 40 ಇಬಿ 5982 ಮತ್ತು ಎಪಿ 05 ಬಿಎಲ್ 3989 ದ್ವಿಚಕ್ರ ವಾಹನ ಮತ್ತು ಕಾರನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ.

ದಿ. 28.10.2021 ರಂದು ನಾನು ಆರೋಪಿಯನ್ನು ನೋಡಿದ ಬಗ್ಗೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮರು ಹೇಳಿಕೆಯ ಅಂಶಗಳನ್ನು ಓದಿ ಹೇಳಲಾಗಿ ಸಾಕ್ಷಿಯು ಅಲ್ಲಗೆಳದಿದ್ದರಿಂದ ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

ಆರೋಪಿಯೊಂದಿಗೆ ರಾಜಿಮಾಡಿಕೊಂಡದ್ದಕೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎಂ. ಎಸ್. ವಕೀಲರಿಂದಃ ಇಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಿಂತಾಮಣಿ.